OCTOBER 17, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಶರನ್ನವರಾತ್ರಿಯ 7ನೇ ದಿನವಾದ ಇಂದು, ಮಾತೆ ಕಾಳರಾತ್ರಿ ಅವತಾರ, ಶುಭಾಂಕರಿ ದೇವಿ ಪೂಜಾ ದಿನ. ನಾಡಿನ ಶಕ್ತಿದೇವತೆಯ ದೇಗುಲಗಳಲ್ಲಿ, ಇಂದಿನ ವಿಶೇಷ ಅಲಂಕಾರ, ಗಮನಸೆಳೆಯುವಂತಿದೆ. ಬೆಲ್ಲದ ಹಲ್ವಾ ಪ್ರಸಾದ ರೂಪದಲ್ಲಿ ವಿತರಿಸಿ, ಶ್ರದ್ಧಾ–ಭಕ್ತಿಯಿಂದ ಆಚರಿಸಲಾಗುತ್ತಿದೆ.

<><><>

ಕೊಡಗು ಜಿಲ್ಲೆ, ತಲಕಾವೇರಿಯಲ್ಲಿ, ಶ್ರೀ ಕಾವೇರಿ ತುಲಾ ಸಂಕ್ರಮಣದ, ಪವಿತ್ರ ತೀರ್ಥೋದ್ಭವ, ಇಂದು ರಾತ್ರಿ 7 ಗಂಟೆ 50 ನಿಮಿಷಕ್ಕೆ, ನಿಗದಿಯಾಗಿದೆ. ಭಕ್ತಾದಿಗಳ ಅನುಕೂಲಕ್ಕಾಗಿ, ಭಾಗಮಂಡಲದಿಂದ–ತಲಕಾವೇರಿ ವರೆಗೆ ಬೆಳಕಿನ ವ್ಯವಸ್ಥೆ, ರಾಜ್ಯ ಸಾರಿಗೆ ಸಂಸ್ಥೆ ವತಿಯಿಂದ, 25 ಬಸ್‌ಗಳನ್ನು ಉಚಿತವಾಗಿ, ಒದಗಿಸಲಾಗಿದೆ.

<><><>

ಧಾರವಾಡದ, ಶ್ರೀ ಮುರುಘಾಮಠದಲ್ಲಿ, ನಾಳೆ ಬೆಳಗ್ಗೆ 9 ಗಂಟೆಗೆ, ಪೂಜ್ಯ ಮೃತ್ಯುಂಜಯ ಅಪ್ಪಗಳವರ, 62ನೇ ಪುಣ್ಯ ಸ್ಮರಣೋತ್ಸವ, ಪಲ್ಲಕ್ಕಿ ಉತ್ಸವ ಹಾಗೂ ಗುರುವಂದನಾ ಸಮಾರಂಭ, ನಡೆಯಲಿದೆ.

<><><>

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಬೆಳಗಾವಿ ಜಿಲ್ಲೆ, ಕಿತ್ತೂರಿಗೆ ಇಂದು ಸಂಜೆ 5 ಗಂಟೆಗೆ ಆಗಮಿಸಲಿದ್ದು, ಕಬ್ಬು ಬೆಳೆಗಾರರು ಸೇರಿದಂತೆ, ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ರೈತರು ನಡಸುತ್ತಿರುವ ಪ್ರತಿಭಟನಾ ಸ್ಥಳದಲ್ಲಿ, ರೈತರೊಂದಿಗೆ ಸಮಾಲೋಚಿಸಲಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಾರ್ವಜನಿಕ ಸೇವೆಯ, ಸಾರ್ಥಕ 25 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆ, ಕೇಂದ್ರ ಆಯೋಜಿತ, 'ಜನ ಸೇವೆಯಿಂದ, ದೇಶ ಸೇವೆ' ಮಾಸಿಕ ಅಭಿಯಾನ; ಆತ್ಮನಿರ್ಭರ ಭಾರತ ಪ್ರಕಲ್ಪದ, ಒಳನೋಟದೊಂದಿಗೆ, ಇಂದಿಗೆ ಸಂಪನ್ನಗೊಳ್ಳಲಿದೆ. 2020ರ ಮೇ 12ನೇ ತಾರೀಖು, ಕೋವಿಡ್–19ರ ಸಾಂಕ್ರಾಮಿಕ ಸಂಕ ್ಟದ ಸಂದರ್ಭದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಘೋಷಿಸಿದ, ಆತ್ಮ ನಿರ್ಭರ ಭಾರತ ಅಭಿಯಾನ, ಭಾರತವನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿಸಿ, ದೇಶೀಯ ಉತ್ಪಾದನೆಗೆ ಉತ್ತೇಜನ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಬಲೀಕರಣ, ಉದ್ಯೋಗ ಸೃಷ್ಟಿ ಹಾಗೂ ತಂತ್ರಜ್ಞಾನ ಅಭಿವೃದ್ಧಿಯನ್ನು, ಕೇಂದ್ರೀಕರಿಸಿದೆ.

<><><>

ಯುರೋಪ್ ಮತ್ತು ಮಧ್ಯ ಏಷ್ಯಾದಿಂದ, ಆಫ್ರಿಕಾ ಖಂಡದತ್ತ ದೀರ್ಘ ಪ್ರಯಾಣ ಬೆಳೆಸುವ, ಅಪರೂಪದ ಯುರೋಪಿಯನ್ ರೋಲರ್, ಆಫ್ರಿಕಾದ ಸಹಾರಾಕ್ಕೆ ತೆರಳುವ ಮುನ್ನ, ದಾವಣಗೆರೆ, ವಿಜಯನಗರ, ಗದಗ, ಧಾರವಾಡ ಹಾಗೂ ಬೆಳಗಾವಿ ಭಾಗದಲ್ಲಿ, ಕಾಣಿಸಿಕ್ಕಿವೆ.

ವಿಜಯನಗರ ಜಿಲ್ಲೆ, ಹೊಸಪೇಟೆಯ ಪಕ್ಷಿಮಿತ್ರ, ಡಾಕ್ಟರ್ ಸಮದ್ ಕೊಟ್ಟೂರ, ಯುರೋಪಿಯನ್ ರೋಲರ್ ವಲಸೆ ಹಕ್ಕಿ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಡಾ. ಸಮದ್ ಕೊಟ್ಟೂರ ಧ್ವನಿ 40 ಸೆಕೆಂದುಗಳು

<><><>

ಕೇಂದ್ರದ ಸಹಪಾಠ ಕಲಿಕೆ ಮತ್ತು ಕ್ಷೇತ್ರಕಾರ್ಯ ಅಧ್ಯಯನದಡಿ, ಹಿಮಾಚಲ ಪ್ರದೇಶದ 30 ಸದಸ್ಯರ ತಂಡ ಹಾಗೂ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳ, ನೀರು ಸರಬರಾಜು ವಿಭಾಗದ, 13 ಜನ ತಜ್ಞರ ತಂಡ, ಧಾರವಾಡ ಜಿಲ್ಲೆ, ಅಳ್ನಾವರಕ್ಕೆ ಭೇಟಿ ನೀಡಿ, ಕಾಳಿ ನದಿ ನೀರು ಯೋಜನೆಯ, ಅನುಷ್ಟಾನ ಮತ್ತು ನಿರ್ವಹಣೆ ಕುರಿತು, ಅಧ್ಯಯನ ನಡೆಸಿತು.

<><><>

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿ ವ್ಯಾಪ್ತಿಯ, 7 ಜಿಲ್ಲೆಗಳ 'ಗೃಹ ಜ್ಯೋತಿ' ಫಲಾನುಭವಿಗಳು, ಈ ವರೆಗೆ ಸಮೀಕ್ಷೆಯಲ್ಲಿ ಅನ್ಯಾನ್ಯ ಕಾರಣಗಳಿಂದ, ಪಾಲ್ಗೊಳ್ಳಲು ಸಾಧ್ಯವಾಗಿರದಿದ್ದರೆ, ಈ ತಿಂಗಳ 31ನೇ ತಾರೀಖಿನ ಒಳಗೆ, ಹೆಸ್ಕಾಂ ಉಪ ವಿಭಾಗದ ಕಚೇರಿಗಳಲ್ಲಿ, ಅಗತ್ಯ ದಾಖಲೆ ಸಲ್ಲಿಸಲು, ಪ್ರಕಟಣೆ ಕೋರಿದೆ.

<><><>

ಮೈಸೂರು ದಸರಾ ಮಹೋತ್ಸವದ ಅಂಗವಾಗಿ, ಇಂದು ರಂಗ ಚಾರ್ಲು ಭವನದ ಆವರಣದಲ್ಲಿ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯೋಜಿಸಿದ್ದ, ಪಾರಂಪರಿಕ ಉಡುಗೆಯಲ್ಲಿ, ದಂಪತಿಗಳಿಗಾಗಿ ಟಾಂಗಾ ಸವಾರಿ ಕಾರ್ಯಕ್ರಮಕ್ಕೆ, ಇಲಾಖೆಯ ಆಯುಕ್ತ ಡಾಕ್ಟರ್ ಪಿ.ಶಿವರಾಜು ಚಾಲನೆ ನೀಡಿದರು.

<><><>

ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ, ನವೆಂಬರ್ 1, ಭಾನುವಾರದಂದು, ಕಡ್ಡಾಯವಾಗಿ ಕನ್ನಡ ರಾಜ್ಯೋತ್ಸವ ಆಚರಣೆಗೆ, ಶಾಲಾ ಶಿಕ್ಷಣ ಇಲಾಖೆ ಆಯುಕ್ತ, ವಿಕಾಸ ಕಿಶೋರ ಸುರಳ್ಕರ ನಿರ್ದೇಶಿಸಿದ್ದಾರೆ.

<><><>

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ಡಾಕ್ಟರ್ ಡಿ. ವೀರೇಂದ್ರ ಹೆಗ್ಗಡೆಯವರು, ಧಾರವಾಡದ ಜನತಾ ಶಿಕ್ಷಣ ಸಮಿತಿ ಜವಾಬ್ದಾರಿ ವಹಿಸಿಕೊಂಡು, 54 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆ, ಸ್ವಾತಂತ್ರ್ಯ ಹೋರಾಟಗಾರ, ದಿವಂಗತ ಹುಕ್ಕೇರಿಕರ ರಾಮರಾಯರು, ಸಂಸ್ಥಾಪಕ ಪ್ರಾಚಾರ್ಯ, ಪ್ರೊಫೆಸರ್ ಬಿ.ಎಂ. ಶ್ರೀಕಂಠಯ್ಯ ಹಾಗೂ ಉಡುಪಿ ಪೇಜಾವರ ಮಠದ, ಪೂಜ್ಯ ವಿಶ್ವೇಶತೀರ್ಥ ಶ್ರೀಪಾದರ ಕೊಡುಗೆ ಸ್ಮರಣಾರ್ಥ, ವಿಶೇಷ ಕಾರ್ಯಕ್ರಮ, ಸನ್ನಿಧಿ ಕಲಾಕ್ಷೇತ್ರದಲ್ಲಿ, ನಾಳೆ ಸಂಜೆ 4.30ಕ್ಕೆ ಆಯೋಜಿತವಾಗಿದೆ ಎಂದು, ಕಾರ್ಯದರ್ಶಿ ಪ್ರೊಫೆಸರ್ ಅಜಿತಪ್ರಸಾದ, ತಿಳಿಸಿದ್ದಾರೆ.

<><><>

ಮೈಸೂರಿನಲ್ಲಿ ನಡೆದ, ದಸರಾ ಕ್ರೀಡಾಕೂಟದಲ್ಲಿ, ಬೆಳಗಾವಿ ವಿಭಾಗವನ್ನು ಪ್ರತಿನಿಧಿಸಿದ್ದ, ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿ ಶೂಟರ್‌ಗಳು, 6 ಪದಕಗಳನ್ನು ಗೆದ್ದಿದ್ದಾರೆ. ಧಾರವಾಡ ಜಿಲ್ಲೆಯಿಂದ 12 ಹಾಗೂ ಗದಗ ಜಿಲ್ಲೆಯಿಂದ ನಾಲ್ವರು ಕ್ರೀಡಾಪಟುಗಳು, ಶೂಟಿಂಗ್ ಸ್ಪರ್ಧೆಯಲ್ಲಿ, ಭಾಗವಹಿಸಿದ್ದರು. ಒಟ್ಟು 3 ಚಿನ್ನ, 1 ಬೆಳ್ಳಿ ಹಾಗೂ 2 ಕಂಚಿನ ಪದಕ, ತಮ್ಮದಾಗಿಸಿಕೊಂಡಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.